SRI H. SHIVAPPA: Sir, the very form of the question has been distorted. This may be answered next time.

Mr. SPEAKER: I agree with you. Please bear with us.

It will be answered next time. We are withholding that question.

ಬಳ್ಳಾರಿ ಜಿಲ್ಲೆಯಲ್ಲಿ ಹೊಸದಾಗಿ ಅಗ್ನಿಶಾಮಕ ಠಾಣೆಗಳನ್ನು ತೆರೆಯುವುದು.

64(439): ಶ್ರೀ. ಆಲಂ ವೀರಭದ್ರಪ್ಪ (ಕುರುಗೋಡು):

ಮಾನ ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬಳ್ಳಾರಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳಿವೆ:

(ಆ) 1996-97ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲಾಗಿದೆ:

(ಇ) 1997-98ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ಜಾಗಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ವಿ.ಸೋಮಣ್ಣ (ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯಸಚಿವರು.)

(ಅ) ಬಳ್ಳಾರಿ ಜಿಲ್ಲೆಯ ಈ ಕೆಳಕಾಣಿಸಿರುವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳಿವೆ:-

(1) ಬಳ್ಳಾರಿ

(2) ಹೊಸಪೇಟೆ

(3) ಸಂಡೂರು

(4) ಹೂವಿನಹಡಗಲಿ

(5) ಕೂಡ್ಲಿಗಿ

(6) ಶಿರಗುಪ್ಪ ಮತ್ತು

(7) ಹರಪನಹಳ್ಳಿ.

(ಆ) 1996-97ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಕಾಣಿಸಿರುವ ಸ್ಥಳಗಳಲ್ಲಿ ಹೊಸ

ಅಗ್ನಿಶಾಮಕ ಠಾಣೆಗಳು ತೆರೆಯಲಾಗಿದೆ:-

(1) ಕೂಡ್ಲಿಗಿ - 16-12-96 ರಂದು

(2) ಶಿರಗುಪ್ಪ - 24-12-96 ರಂದು

(3) ಹೂವಿನಹಡಗಲಿ - 10-1-97 ರಂದು

(ಇ) 1997-98ನೇ ಸಾಲಿನಲ್ಲಿ ಹೊಸ ಅಗ್ನಿಶಾಮಕ ಠಾಣೆಗಳನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಗೆ ಬಂದಿಲ್ಲ. ಅದಕ್ಕೆ ಇನ್ನೂ ಕಾಲವಕಾಶವಿದೆ.

ಶ್ರೀ ಅಲ್ಲಂ ವೀರಭದ್ರಪ್ಪ:- ನನ್ನ ಕ್ಷೇತ್ರವಾದ ಕುರುಗೋಡು ಕ್ಷೇತ್ರದಲ್ಲಿ ಬಹಳ ತೊಂದರೆ ಇದ್ದು ಅಲ್ಲಿ ಹೆಚ್ಚು ಭತ್ತ ಜೋಳ ಬೆಳೆಯುತ್ತಾರೆ. ಇದರಿಂದಾಗಿ ಹೆಚ್ಚು ಬೆಂಕಿ ಅನಾಹುತವಾಗುವ ಸಂದರ್ಭ ಇದೆ. ನಮ್ಮ ಕುರುಗೋಡು ತಾಲ್ಲೂಕಿಗೆ ಈ ಬಜೆಟ್ಟಿನಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ವಿ.ಸೋಮಣ್ಣ:- ಬಳ್ಳಾರಿ ಜಿಲ್ಲೆಯಲ್ಲಿ ಅಗ್ನಿಶಾಮಕ ಠಾಣೆಯನ್ನು ಕೊಟ್ಟಿದ್ದೇವೆ. ಆದರೆ ನಿಮ್ಮ ತಾಲ್ಲೂಕಿಗೆ ಕೊಟ್ಟಿಲ್ಲ. ತಮ್ಮ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ವಿಚಾರ ನಮ್ಮ ಮುಂದೆ ಬಂದಿಲ್ಲ. ಹರಪನಹಳ್ಳಿ ಇತರ ಏಳು ಕಡೆಗಳಲ್ಲಿ ತೆರೆದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಇನ್ನು ಮೂರು ಅಗ್ನಿಶಾಮಕ ಠಾಣೆಗಳನ್ನು ತೆರೆದಿದ್ದೇವೆ. ಇನ್ನು ಒಂದು ತಾಲ್ಲೂಕಿನಲ್ಲಿ ತೆರೆಯಬೇಕೆಂದು ತಾವು ನನಗೆ ಪತ್ರ ಕಳಿಸಿಕೊಟ್ಟರೆ ಪರಶೀಲನೆ ಮಾಡಿ 1997-98 ರಲ್ಲಿ ಠಾಣೆಯನ್ನು ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ:- ಕಳುಹಿಸಿಕೊಡುತ್ತೇವೆ.

ಚಿಕ್ಕಮಗಳೂರು ನಗರ ಸಭೆ ವ್ಯಾಪ್ತಿಯಲ್ಲಿ ಹರಿಯುವ ಕಾಲುವೆಗಳ ದುರಸ್ತಿ.

65(408.) ಶ್ರೀ ಸಿ.ಆರ್.ಸಗೀರ್ ಅಹಮದ್. (ಚಿಕ್ಕಮಗಳೂರು):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಚಿಕ್ಕಮಗಳೂರು ನಗರ ಸಭೆಯ ವ್ಯಾಪ್ತಿಯಲ್ಲಿ ಹರಿಯುವ ಕಾಲುವೆಗಳ ದುರಸ್ತಿಗಾಗಿ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ:

(ಆ) ಬೇಡಿಕೆ ಬಂದಿದ್ದಲ್ಲಿ ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)